Regd No M 1299 33 ನೇ ವರ್ಷ ತಾ|| 19—6—50

ಸತ್ಯವಾದಿ
SATYAVADI

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ನಿರಾಶ್ರಿತರಿಗೆ 75 ಕೋಟಿ ಪರಿಹಾರ

ನಿರಾಶ್ರಿತರ ಪುನರ್ವಸತಿ ಮಹೋದ್ದೇಶದಿಂದ ಶ್ರೇಷ್ಠಾಧಿಕಾರ ಸಮಿತಿ ಮಾಡಿದ ಶಿಫಾರಸನ್ನು ಅಂಗೀಕರಿಸಿ 1950-51 ರಿಂದ ಪ್ರಾರಂಭವಾಗುವ 3 ಆರ್ಥಿಕ ವರ್ಷಗಳಿಗೆ ರೂ 75 ಕೋಟಿ ಪರಿಹಾರವನ್ನು ಭಾರತ ಸರ್ಕಾರ ಒಡಂಬಟ್ಟಿದೆಯೆಂದು ದಿಲ್ಲಿ ವಾರ್ತೆಯೊಂದರಿಂದ ಗೊತ್ತಾಗಿದೆ.

ಆಫ್ಘಾನಿಗೆ ಸೂಚನೆ !

ಫಕ್ತೂಸ್ತಾನ್ ಚಳವಳಿಗೆ ಉತ್ತೇಜನಕೊಡದೆಂದು ಆಂಗ್ಲೊ-ಅಮೇರಿಕ ಆಫ್ಘಾನ್ ಸರ್ಕಾರಕ್ಕೆ ತಿಳುಹಿದೆಯೆಂಬ ವಾರ್ತೆ ವಾಷಿಂಗ್ಟನ್‌ನಿಂದ ಗೊತ್ತಾಗಿದೆ

ರಾಷ್ಟ್ರೀಯ ವಿವಾಹಗಳು

ಇದೇ ತಾ|| 11 ರಲ್ಲಿ ಚಿತ್ರದುರ್ಗದಲ್ಲಿ 6 ರಾಷ್ಟ್ರೀಯ ವಿವಾಹಗಳು ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಯಶೋಧರಮ್ಮನವರ ಅಧ್ಯಕ್ಷತೆಯಲ್ಲಿ ಒಂದೇ ಚಪ್ಪರದಲ್ಲಿ ಒಂದೇ ಕಾಲದಲ್ಲಿ ನೆರವೇರಿದವು.

ಕಮ್ಯುನಿಸ್ಟರ ಇಳಿಮುಖ

ಕಮ್ಯುನಿಸ್ ಕಾಟ ಮದರಾಸು ಪ್ರಾಂತ್ಯದಲ್ಲಿ ಇಳಿಮುಖವಾಗುತ್ತಿದೆ.

ಅರ್ತಕ್ಷತೆ

ಚಿ|| ಎ. ಗೋಪಾಲರಾವ್ (ಶ್ರೀ ಲಕ್ಷ್ಮೀನರಸಿಂಹ ಪೆಸ್ ಮಾಲೀಕರಾದ ಶ್ರೀ ಡಿ. ಅಣ್ಣಾಜಿರಾಯರ ಪುತ್ರ) ಚಿ|| ಸೌ|| ಕೃಷ್ಣಾಬಾಯಿ (ಕಾಸರಗಾಡಿನ ಶ್ರೀ ಕಪಲಾಕ್ಷ ನರೋತ್ತಮ ಕಾಮತ್‌ರವರ ಪುತ್ರಿ) ಇವರ ವಿವಾಹ ಸಂಬಂಧವಾಗಿ ಮೊನ್ನೆ ಸಂಜೆ ಮೈಸೂರು ಶ್ರೀರಂಪೇಟೆಯಲ್ಲಿರುವ ಶ್ರೀ ಡಿ. ಅಣ್ಣಾಜಿರಾಯರ ಸ್ವಗೃಹದಲ್ಲಿ ಅರ್ತಕ್ಷತೆ ವೈಭವವಾಗಿ ಏರ್ಪಾಟಾಗಿತ್ತು.

ಭಾರತ ಸರ್ಕಾರ ಅರಳಿ ಬೆಲೆಯನ್ನು ರೂ 620 ರಿಂದ ರೂ 720 ರೂ. ಗಳಿಗೆ ಹೆಚ್ಚಿಸಿದೆ ಇದೇ ಬೆಲೆ ಇನ್ನಾರು ತಿಂಗಳ ವರಿಗೆ ವ್ಯತ್ಯಾಸವಾಗಲಾರದು. ಅರಿವೆ ಬೆಲೆ ಶೇ 10 ರಿಂದ 12 ರ ವರಿಗೆ ಹೆಚ್ಚಲಿದೆ.

ಸುಭಜಿತ ಕಾಶ್ಮೀರವನ್ನು ಪಾಕಿಸ್ತಾನ ಅಪೇಕ್ಷಿಸುತ್ತಿಲ್ಲವೆಂದು ವಿದೇಶಾಂಗ ಸಚಿವ ಸರ್ ಮಹಮದ್ ಜಫ್ರುಲ್ಲ ಕರಾಚಿಯಲ್ಲಿ ಮೊನ್ನೆ ತಿಳಿಸಿರುವರು.

ಮೊಹೆಯಲ್ಲಿ 68 ಭಾರತೀಯರ ವಿಚಾರಣೆ ನಡೆದು ಶಿಕ್ಷೆಸಲ್ಪಟ್ಟ ಬಗ್ಗೆ ಭಾರತಕ್ಕಾಯಭಾರಿ ಫ್ರೆಂಚ್ ವಿದೇಶ ಕಚೇರಿಗೆ ಪ್ರತಿಭಟನಾ ಪತ್ರ ತಲುಪಿಸಿದರೆಂದು ಪ್ಯಾರಿಸ್ ವಾರ್ತೆ ತಿಳಿಸುತ್ತದೆ

ಒಂದು ಬ್ಲೇಸ್ ತೂಕದ ರೇಡಿಯೋ ಸೆಟ್‌ನ್ನು ಬ್ರಿಟಿಷ್ ಕಂಪೆನಿಯೊಂದು ತಯಾರಿಸಿರುವುದಾಗಿ ವರದಿಯಾಗಿದೆ.

ಮೈಸೂರು ಪ್ರಧಾನಿ ಶ್ರೀ ಕೆ. ಸಿ. ರೆಡ್ಡಿಯವರು ನಾಳೆ ದಿವಸ ಊಟಿಯಿಂದ ಬೆಂಗಳೂರಿಗೆ ತೆರಳುವರೆಂದು ಗೊತ್ತಾಗಿದೆ.

† ಮಹಾತ್ಮ ಗಾಂಧಿಯವರ ಪುತ್ರ ಶ್ರೀ ದೇವದಾಸ್ ಗಾಂಧಿಯವರು ನಿನ್ನೆ ಮೈಸೂರು ಪ್ರಭುಗಳೊಹನೆ ದೀರ್ಘ ಸಂಭಾಷಣೆ ನಡೆಸಿದರು.

‡ ರಷ್ಯದ ಓರ್ವ ಮಹಿಳಾ ವಿಜ್ಞಾನಿಯು ಸ್ಪುಟ್ನಿಕ್ ಮೂಲ ಸಂಶೋಧಿಸಲಿರುವಳೆಂದು ಲಂಡನ್ ವಾರ್ತೆ.

* ರಂಗೂನಲ್ಲಿ ಸಮೂಹೇತಗೊಂಡಿದ್ದ ವಿಶ್ವಶಾಂತಿ ಪರಿಷತ್ತು ಅಣುಬಾಂಬು ಬಳಸುವ ರಾಷ್ಟ್ರವನ್ನು ವಿಶ್ವದ ಪ್ರಥಮ ವೈರಿ ರಾಷ್ಟ್ರವೆಂದು ದಂಡಿಸಬೇಕು ಎಂದು ನಿನ್ನೆ ನಿರ್ಣಯಿಸಿದೆ.

† ಸಿಂಗಪುರದಲ್ಲಿ ಮಹಾತ್ಮ ಗಾಂಧಿ ಸ್ಮಾರಕ ನಿರ್ಮಾಣಕ್ಕೆ ಶಿಲಾ ಪ್ರತಿಷ್ಠಾಪನೋತ್ಸವವನ್ನು ಸಂ|| ನೆಹರು ನಿನ್ನೆ ನೆರವೇರಿಸಿದರು.

* ಜಿನೀವಾದಲ್ಲಿ ಜುಲೈ 3 ರಲ್ಲಿ ಸೇರುವ ವಿಶ್ವಜನಾಂಗ ಸಂಸ್ಕೃತಿ ಸಮಿತಿ ಸಭೆಗೆ ಭಾರತ ನಿಯೋಗದ ನಾಯಕತ್ವವನ್ನು ಸರ್ ಆರ್ಕಾಟರು ವಹಿಸುವರೆಂದು ದಿಲ್ಲಿ ವಾರ್ತೆ.

† ಸಿಂಗಪುರದಲ್ಲಿ ನಿನ್ನೆ ಸಂ|| ನೆಹ್ರು ಅರ್ಧ ಲಕ್ಷ ಜನರ ಮುಂದೆ ಭಾಷಣ ಮಾಡಿ ಮಲಯ ಕ್ರಾಂತಿಕಾರರ ನೀತಿ ಅನರ್ಥಕಾರಿ; ಗಾಂಧಿ ತತ್ವವೊಂದೆ ಅಲ್ಲಿಗೆ ಹೆದ್ದಾರಿ ಎಂದು ನುಡಿದರು.

* ಹೊಸದುರ್ಗ ಸುತ್ತೀಲೆ ಬಗ್ಗೆ ಪುನರ್ವಿಚಾರಣೆ ನಡೆಯುವುದೆಂಬ ಪತ್ರಿಕಾ ಸುದ್ದಿಗೆ ಆಧಾರವಿಲ್ಲ ಎಂದು ಮೈಸೂರು ಸರ್ಕಾರ ಪ್ರಕಟಿಸಿದೆ.

‡ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರಗತಿ ಕುರಿತು ಮೈಸೂರು ಸರಕಾರ ಪತ್ರಿಕಾ ಪ್ರಕಟಣೆ ಇತ್ತಿದೆ.

ವಿದ್ಯುಚ್ಛಕ್ತಿ ಹೊಡೆಯಿತು

ನಿನ್ನೆ ದಿವಸ ಜಾವಳಿಪುರಂನಲ್ಲಿ ಬಾಲಕನೋರ್ವ ಪಟಾ ಬಿಡುತ್ತಿದ್ದು ಕಂತಿಗೆ ಆದು ಸಿಲುಕಿ ವಿದ್ಯುಚ್ಛಕ್ತಿ ಅವನಿಗೆ ಬಡಿದು ಆಸ್ಪತ್ರೆಗೆ ದಾಖಲಾಗಿಯಿತೆಂದು ತಿಳಿದುಬಂದಿದೆ.

ಪ್ರಚಾರ ವಿರೋಧಿ

ಬೊಂಬಾಯಿ ಒಳಾಡಳಿತ ಸಚಿವ ಶ್ರೀ ಮುರಾರ್ಜಿ ದೇಸಾಯರು ತಮ್ಮ ಭಾಷಣ ಚಿತ್ರಗಳನ್ನು ಪತ್ರಿಕೆಗಳಿಗೆ ಕೊಡಕೂಡದೆಂದು ತಿಳಿಸಿದ್ದಾರೆ.

ಸಹಕಾರ ಶಿಕ್ಷಣ ಸಮಿತಿ

ಈ ದಿವಸ ಸಂಜೆ 5—30 ಗಂಟೆಗೆ ಮೈಸೂರು ಸಿಟಿ ಕೋ-ಆಪರೆಟಿವ್ ಬೇಂಕ್, ಲಿ. ಸಭಾಂಗಣದಲ್ಲಿ ಸಹಕಾರ ಶಿಕ್ಷಣ ಸಮಿತಿ ಆಶ್ರಯದಲ್ಲಿ ' ಸರ್ಕಾರದವರ ಹಸ್ತಕ್ಷೇಪವು ಮತ್ತು ಪ್ರವೇಶವು ತಪ್ಪಿದ ಹೊರತು ಸಹಕಾರದ ಚಳುವಳಿಯು ಮುಂದುವರಿಯಲಾರದು ' ಎಂಬ ವಿಷಯದ ಮೇಲೆ ಚರ್ಚಾಕೂಟವು ಏರ್ಪಾಟಾಗಿದೆ ಶ್ರೇಯುತರುಗಳಾದ ವಿ. ಕೆ ದೊರೆಸ್ವಾಮಿ, ಬಿ ಎ. (ಆನರ್ಸ್), ಅಸ್ಥಾನ ವಿದ್ವಾನ್ ಎಚ್. ಚನ್ನಕೇಶವಯ್ಯಂಗಾರ್. ಎಂ. ಓ. ಎಲ್. ಮಹಾವಿದ್ವಾನ್ ವೈ. ಚಂಡ್ರಶೇಖರ ಶಾಸ್ತ್ರಿ, ಎಂ. ಎ ಎಂ. ಎಸ್. ರಾಮಸ್ವಾಮಿ, ಎಂ. ಎ. ಮತ್ತು ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ ಎಂ. ಎ. ಬಿ. ಎಲ್, ರವರು ಚರ್ಚೆಯಲ್ಲಿ ಭಾಗವಹಿಸಲು ದಯೆಯಿಟ್ಟು ಒಪ್ಪಿರುತ್ತಾರೆ. ಸರ್ವರಿಗೂ ಆಹ್ವಾನವುಂಟೆಂದು ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

ವೈಡ್ ಲ್ಯಾಂಡ್ಸ್

ವೈಭವ 4 ನೇ ವಾರ

ಮೋತೀಲಾಲ್, ಸೂರ್ಯಕಾಂತ, ಸಿತಾರ, ಕಕ್ಕೂ ಅಭಿನಯಿಸಿರುವ ಸುಂದರ ಹಿಂದಿ ವಾಕ್ಚಿತ್ರ

LEKH ■ ಲೇಖ್

ಮುಸ್ಲಿಂ ಮಹಾಜನರ ಕೋರಿಕೆಯಂತೆ

ಮೆಕ್ಕದ ಹಜ್ ಚಿತ್ರವು

ಲೇಖ್ ಚಿತ್ರದೊಂದಿಗೆ

22—6—50 ರವರಿಗೆ ಪ್ರದರ್ಶಿಸಲಾಗುತ್ತದೆ

ಅಪೇರಾ

ಯಶಸ್ವಿ 2 ನೇ ವಾರ

ಮಿಸ್ ಕುಮಾರಿ — ಮೈಕಂ ಮಣಿ ಪಾತ್ರವಹಿಸಿರುವ ಸುಂದರ ಚಿತ್ರ

(ಮಲಯಾಳಂ ಭಾಷೆ)

ನಲ್ಲತಂಗಾಳ್

ಮುಂದಿನ ವಿನೋದ—

ಮಾಯಾವತಿ

ಅಮೋಘ ತಮಿಳು ಚಿತ್ರ

ರಣಜಿತ್ ಟಾಕೀಸಿನಲ್ಲಿ—

ಜನಭರಿತ 2 ನೇ. ವಾರ

ವರಲಕ್ಷ್ಮಿ, ಪ್ರಕಾಶರಾವ್, ಶಿವರಾವ್, ನಾರಾಯಣರಾವ್ ಅಭಿನಯಿಸಿರುವ ಮಧುರ ಸಂಗೀತ, ನೃತ್ಯ, ವಿನೋದಗಳಿಂದ ಕೂಡಿದ ಸಾಮಾಜಿಕ ತೆಲುಗು ಚಿತ್ರ

ಪ್ರಕಾಶ್ ಪ್ರೊಡಕ್ಷನ್ಸ್‌ರವರ

ಮೊದಟಿ ರಾತ್ರಿ

[First Night]

— ಸಕಲರೂ ನೋಡಬೇಕಾದ ಚಿತ್ರ —

ಪ್ರತಿ ದಿನ 3 ಆಟಗಳು

— A Prakash Pictures Release

Edited, Printed and Published by M. S. Krishna Rao, at the Satyavadi Press, Chamarajpuram Mysore

ಸಂಪುಟ ೮ ಪಂಚಿಕೆ ೪೩ ॥ ಶ್ರೀ ॥ ತಾ॥ 19-6-1950

— ಪ್ರ ಬೋ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು.
ಶ್ರೀ ಕೃಷ್ಣಾನಂದಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಆಧುನಿಕ ವಿಕಾಸವಾದ

[ಮುಂದುವರಿದುದು]

ಅತಃ ಸರ್ವ ಪ್ರಾಣಿಗಳ ವಿಚಿತ್ರ ಕರ್ಮಾನುಸಾರವಾಗಿಯೇ ಭಗವಂತನು ವಿಶ್ವದ ವಿಧಾನವನ್ನು ಮಾಡುತ್ತಾನೆ. ಮಹಾ ಪ್ರಲಯ ಕಾಲದಲ್ಲಿ ಅನಂತ ಬ್ರಹ್ಮಾಂಡಗಳು ಕಾರಣನಲ್ಲಿ ವಿಲಯ ಹೊಂದುತ್ತವೆ ಮತ್ತು ಸೃಷ್ಟಿ ಕಾಲದಲ್ಲಿ ಅದೇ ಮಹಾ ಕಾರಣನಿಂದ ಪುನಃ ಪ್ರಾದುರ್ಭಾವವಾಗುತ್ತದೆ. ಚಿಕ್ಕದಾದ ವಟ ಬೀಜದೊಳಗೆ ಅಂಕುರ, ನಾಳ, ಸ್ಕಂಧ, ಶಾಖೆ, ಉಪ ಶಾಖೆ, ಪತ್ರ, ಪಲ್ಲವ, ಫಲ – ಎಲ್ಲವೂ ಅಡಗಿರುತ್ತವೆ ಹೀಗಿಲ್ಲದಿದ್ದರೆ ಧರಣಿ, ಅನಿಲ, ಜಲಗಳ ಸಂಸರ್ಗವಿದ್ದರೂ ಅದರ ವಿಕಾಸ ಹೇಗಾದೀತು? ಇಷ್ಟೇ ಅಲ್ಲ ಒಂದು ವಟ ಬೀಜದಲ್ಲಿ ಅರ್ಜು-ಖರ್ಜೂರಗಳ ವೃಕ್ಷಗಳ ಅಸ್ಥಿತ್ವವನ್ನು ಒಪ್ಪಿಕೊಳ್ಳಬೇಕಾಗುವುದು. ಹೀಗಯೇ ಮಹಾ ಕಾರಣದಿಂದಲೇ ಸಮಸ್ತ ಪ್ರಪಂಚದ ಪ್ರಾದುರ್ಭಾವವೆಂದು ಮನ್ನಿಸಿದ ಬಳಿಕ, ಅವನಲ್ಲಿ ಅನಂತ ವಿಜ್ಞಾನಗಳೂ, ಅನಂತ ಶಕ್ತಿಗಳೂ ಇವೆಯೆಂದು ಯುಕ್ತಿಸುವುದು ಅನಿವಾರ್ಯವಾಗುವುದು ಮೊದಲು ಅನಂತ ಬ್ರಹ್ಮಾಂಡಗಳು, ಆಮೇಲೆ ಒಂದೊಂದು ಬ್ರಹ್ಮಾಂಡದಲ್ಲಿ ಅನಂತ ಭೋಗ್ಯಗಳು ಮತ್ತು, ಅನಂತ ಭೋಕ್ತೃಗಳು, ಒಬ್ಬೊಬ್ಬ ಭೋಕ್ತೃವಿನ ಅನಂತಾನಂತ ಜನ್ಮಗಳಲ್ಲಿ ಅನಂತ ಕರ್ಮಗಳು, ಒಂದೊಂದು ಕರ್ಮಕ್ಕೆ ವಿಚಿತ್ರವಾದ ಅನೇಕ ಫಲಗಳು – ಇವೆಲ್ಲವನ್ನೂ ಅರಿಯುವುದೂ, ಅವುಗಳನ್ನು ಯಥಾಯೋಗ್ಯವಾಗಿ ವಿಭಾಗಿಸುವುದೂ ಯಾವ ಕಾರ್ಯಗಳೊ, ಅ ಮೂಲ ಕಾರಣನು ಅಲ್ಪ ಶಕ್ತಿವಂತನು ಹೇಗಾದಾನು? ಅನ್ಯಥಾ ಪೂರ್ವ ಕಾಲದಲ್ಲಿ ಜ್ಞಾನ-ಕ್ರಿಯಾ-ಶಕ್ತಿ-ಸಭ್ಯತಾ-ಸಂಸ್ಕೃತಿಗಳ ವಿಕಾಸ ಹಾಗೂ ಉತ್ತರೋತ್ತರ ವಿಕಾಸವೆಂಬ ಈ ಪಕ್ಷವು ಎಷ್ಟರ ಮಟ್ಟಿಗೆ ಸಂಭವವಾದೀತು? ಅಲ್ಪಜ್ಞನಾದ ನವಶಿಕ್ಷಿತ ಶಿಲ್ಪಿಯೊಬ್ಬನು ಏನಾದರೂ ಕೆಲಸ ಮಾಡಬೇಕಾಗಿ ಬಂದಲ್ಲಿ, ಆಗ ಮಾತ್ರ ಅಲ್ಲಿ ಸೌಂದರ್ಯದ ಕ್ರಮವಿಕಾಸವಾಗಬಹುದು.

'ವಿಕಾಸ' ಶಬ್ದದ ಶಾಬ್ದಿಕ ಅರ್ಥ ನೋಡಿದರೂ ಅಗಲೂ ಸಹ ವಿದ್ಯಮಾನದ ಅಭಿವ್ಯಕ್ತಿ ಮಾತ್ರವೇ ವಿಕಾಸವೆಂದು ಒಪ್ಪಿಕೊಳ್ಳಬೇಕಾಗುವುದು ಯಾವುದರಲ್ಲಿ ಅಭಿವ್ಯಕ್ತಿಯಿರುತ್ತದೋ, ಅದರ ತಿರೋಭಾವವನ್ನೂ ಒಪ್ಪಬೇಕಾಗುವುದು. ಈ ಅಭಿವ್ಯಕ್ತಿಯ ತರುವಾಯ ತಿರೋಭಾವ, ತಿರೋಭಾವದ ಬಳಿಕ ಅಭಿವ್ಯಕ್ತಿಯೆಂಬುದು ಹಗಲು ರಾತ್ರಿ, ಗ್ರೀಷ್ಮ ವರ್ಷ ಮುಂತಾದುವುಗಳಂತೆ ಅನಾದಿ ಪರಿವರ್ತನವೆಂಬುದು ಮನನೀಯವೇ ಸರಿ. ಜಗತ್ಪಿತ ಪರಿವರ್ತನೆಯು ಸ್ಪಷ್ಟವಿದೆ. ಅಗಂತೂ ಬೇರಾವ ಮಾತೂ ಹೊಸದಲ್ಲ – 'ಭೂತಗ್ರಾಮಃ ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ' ಅದೇ ಭೂತ ಗ್ರಾಮವು ಪುನಃ ಪುನಃ ಹುಟ್ಟಿ ಪ್ರತೀತವಾಗುತ್ತದೆ – ಭಿನ್ನ ಭಿನ್ನ ಸೃಷ್ಟಿಗಳಲ್ಲಿ ಅಂತೆಯೇ ಸೂರ್ಯ, ಅಂತೆಯೇ ಚಂದ್ರ, ಅಂತೆಯೇ ಭೂಧರ, ಸಾಗರ ಎಲ್ಲವೂ ಮಾಡಲ್ಪಡುತ್ತವೆ ಈ ಪರಿವರ್ತನ ಚಕ್ರದ ವೇಗದಲ್ಲಿ ಅದರೊಟ್ಟಿಗೇ ಪ್ರವಾಹಿತವಾಗುವ ಪ್ರಾಣಿಗಳಲ್ಲಿ ಸಾತ್ವಿಕ, ರಾಜಸ, ತಾಮಸ ಮುಂತಾದ ಎಲಾ ಭಾವಗಳ ಆವಿರ್ಭಾವತಿರೋಭಾವಗಳಾಗುತ್ತಾ ಇರುತ್ತವೆ. ಧರ್ಮ-ಅಧರ್ಮ ಮತ್ತವು ಗಳಿಗನುಸಾರವಾಗಿಯೇ ಬ್ರಹ್ಮಾದಿ ಸ್ಥಾವರಾಂತ ಯೋನಿಗಳಲ್ಲಿ ಸುತ್ತಬೇಕಾಗುತ್ತದೆ ಈ ರೀತಿಯಾಗಿ ನಿರಂತರ ಕ್ರಮಿಕ ಉನ್ನತಿಯೆನ್ನತ್ತಿರುವ ಆಧುನಿಕ ವಿಕಾಸವಾದವು ಸರ್ವಥಾ ಭ್ರಮಪೂರ್ಣ ಸಿದ್ಧಾಂತವೆಂದು ತಿಳಿದುಬರುವುದು. ಆದರೆ ಇಂದಿದರ ಪ್ರಭಾವವು ಎಲ್ಲಾ ಕ್ಷೇತ್ರಗಳಲ್ಲಿದೆ. ಇತಿಹಾಸಗಳು ಇದೇ ಆಧಾರದ ಮೇಲೆ ಬರೆಯಲ್ಪಡುತ್ತವೆ. ನಮ್ಮ ಪೂರ್ವಜರು ಕಾಡಾಡಿಗಳಾಗಿದ್ದರೆಂದು ನಮಗೆ ತಿಳಿಸಲಾಗುತ್ತಿದೆ. ಆಶ್ಚರ್ಯವೇನೆಂದರೆ ಪೂರ್ಣ ರೂಪದಿಂದ ವಿಚಾರ ಮಾಡದೇನೆಯೇ ಈ ಸಿದ್ಧಾಂತಗಳು ಒಪ್ಪಿಕೊಳ್ಳಲ್ಪಡುತ್ತವೆ. ನಿಷ್ಪಕ್ಷ ರೂಪದಿಂದೊಂದುವೇಳೆ ಗಂಭೀರವಾಗಿ ವಿಚಾರ ಮಾಡಿದುದ್ದಾರೆ, ವಾಸ್ತವದಲ್ಲಿ ನಮ್ಮ ವೇದಾದಿ ಶಾಸ್ತ್ರಗಳು ತಿಳಿಸಿದ ಸಿದ್ಧಾಂತಗಳೇ ಸತ್ಯ ಹಾಗೂ ಮಾನ್ಯಗಳೆಂದು ಒಪ್ಪಿಕೊಳ್ಳಬೇಕಾಗುವುದು.

.... ಸದ್ಗುರು ವಾಣಿ ....

[ಪ್ರೇಷಕ— ಗುರುಭಕ್ತ]

"ಭಗವನ್ನಾಮದಿಂದ ಜೀವನು ಶಿವನಾಗಿಬಿಡುವನು"

ಒಬ್ಬ ಮಹಾತ್ಮನು ತಮ್ಮ ಶಿಷ್ಯರಿಗೆ ಯಾವಾಗಲೂ 'ಮಕ್ಕಳೇ! ಪ್ರೇಮದಿಂದ ಪ್ರಭುವಿನ ನಾಮಸ್ಮರಣೆ ಮಾಡಿರಿ' ಎಂದು ಉಪದೇಶ ಮಾಡುತ್ತಾ ಇದ್ದರು. ಮಹಾತ್ಮರ ಈ ಉಪದೇಶವನ್ನು ಕೇಳಿ ಅವರ ಶಿಷ್ಯರಲ್ಲಿ ಒಬ್ಬನು ಒಂದು ದಿನ 'ಪೂಜ್ಯರೇ! ತಾವು ನಿತ್ಯವೂ ಒಂದೇ ಉಪದೇಶವನ್ನು ಏಕೆ ಮಾಡುತ್ತೀರಿ? ಇದರಲ್ಲಿ ನವೀನತೆ ಏನಿದೆ? ಇದನ್ನಾರದೋ ಎಲ್ಲರೂ ಬಲ್ಲರು; ನಾವು ಇದರಿಂದ ಸಂತುಷ್ಟರಾಗಲಾರೆವು; ತಮ್ಮಿಂದ ಇದಕ್ಕಿಂತ ಹೆಚ್ಚಿನ ಆನಂದವನ್ನು ಹೊಂದುವ ಆಸೆಯಿಟ್ಟುಕೊಂಡಿರುವೆವು' ಎಂದು ನುಡಿದನು. ಇದನ್ನು ಕೇಳಿ ಆ ಮಹಾತ್ಮರು 'ಉತ್ತಮವಾದ ಉಪದೇಶವನ್ನು ನಾವು ಹಿಂದಿನಿಂದ ಕೊಡುವೆವು ಈಗ ನೀನು ಒಂದು ಕೆಲಸವನ್ನುಮಾಡು. ನಿನ್ನ ಮುಂದೆ ಈ ನನ್ನ ಹಳೆಯ ಕಂಬಳಿ ಬಿದ್ದಿದೆ, ಇದರ ಒಂದೊಂದು ನೂಲನ್ನು ಕಿತ್ತು ಬೇರೆ ಮಾಡು' ಎಂದು ಅಪ್ಪಣೆಯಿತ್ತನು. ಶಿಷ್ಯನು ಗುರುಗಳ ಆಜ್ಞೆಯನ್ನು ಪಡೆದು ಕಂಬಳಿಯಿಂದ ಎಳೆಯನ್ನು ಬೇರೆ ಮಾಡುತ್ತಾ ಇದ್ದನು. ಕೊನೆಗೆ ಅವುಗಳದೊಂದು ರಾಶಿಯಾಗಿಬಿಟ್ಟಿತು. ಆಗ ಗುರುಗಳು ಶಿಷ್ಯನನ್ನು ಕುರಿತು— 'ಪುತ್ರಾ! ಇಂದು ನನಗೆ ಬಹಳ ಛಳಿಯಾಗುತ್ತಿದೆ. ನನಗೆ ಕಂಬಳಿ ಬೇಕು, ನನ್ನ ಆ ಕಂಬಳಿ ಎಲ್ಲಿದೆ, ತಾ' ಎಂದರು. ಶಿಷ್ಯ— 'ಸ್ವಾಮಿ! ಆ ಕಂಬಳಿಯಾದರೋ ಬರಿಯ ನೂಲೇಸೂಲಾಗಿ ಬಿಟ್ಟಿತು, ಈಗ ಕಂಬಳಿಯುಳಿಯಲಲ್ಲ' ಎಂದನು. ಗುರು— 'ಏನು ಹೇಳುತ್ತೀ, ಒಂದೊಂದು ನೂಲನ್ನು ಕಿತ್ತುದರಿಂದ ಕಂಬಳಿ ನಿಶ್ಶೇಷವಾಗಿಬಿಟ್ಟಿತೇ?' ಶಿಷ್ಯ— 'ಸ್ವಾಮಿ! ತಾವು ಹೇಳಿದಲ್ಲಿ ಆ ನೂಲುಗಳಿಂದಲೂ ಕೂಡ ಒಂದೊಂದು ಉಣ್ಣೆಯನ್ನು ಬಿಡಿಸಿ ರಾಶಿ ಹಾಕಿ ಬಹುದು'. ಆಗ ಗುರುಗಳೆಂದರು— 'ವತ್ಸಾ! ಹೇಗೆ ಒಂದೊಂದು ಸೂತ್ರವನ್ನು ಬಿಡಿಸುತ್ತಾ ಬಿಡಿಸುತ್ತಾ, ಆ ಕಂಬಳಿಯು ಸೂತ್ರ ರೂಪದಲ್ಲಿ ಪರಿವರ್ತಿತವಾಗಿ ಬಿಟ್ಟಿದೆಯೋ, ಇದೇ ರೀತಿ ಒಂದೊಂದು ಬಾರಿ ದೇವರ ನಾಮ ಉಚ್ಚರಿಸುತ್ತಾ ಉಚ್ಚರಿಸುತ್ತಾ, ಜೀವನೂ ಶಿವರೂಪದಲ್ಲಿ ಮಾರ್ಪಡುವನು ಹೇಗೆ ಕಂಬಳಿಯಿಂದ ಎಷ್ಟು ಹೆಚ್ಚಿಗೆ ಉಣ್ಣೆ ಬಿಡಿಸಲಾಗುವುದೋ, ಅಷ್ಟೇ ಕಡಮೆ ನೂಲು ಅದರಲ್ಲಿ ಉಳಿಯುವುದೋ, ಅದರಂತೆಯೇ ನೀನು ಎಷ್ಟೆಷ್ಟು ಅಧಿಕವಾಗಿ ದೇವರ ನಾಮವನ್ನು ಸ್ಮರಣೆ ಮಾಡುತ್ತಾ ಇರುವೆಯೋ, ಅಷ್ಟೇ ಅಧಿಕವಾಗಿ ನಿನ್ನ ಪಾಪವು ನಾಶವಾಗುತ್ತಾ ಹೋಗುವುದು, ಹಾಗೂ ಅಂತಃಕರಣವು ಶುದ್ಧವಾಗುತ್ತಾ ಹೋಗುವುದು. ಎಷ್ಟೆಷ್ಟು ನಿನ್ನ ಅಂತಃಕರಣವು ಶುದ್ಧವಾಗುತ್ತಾ ಹೋಗುವುದೋ, ಅಷ್ಟಷ್ಟು ಹೆಚ್ಚಿಗೆ ನೀನು ದೇವರ ಸನ್ನಿಧಾನವಾಗುತ್ತಾ ಹೋಗುವಿ. ಮತ್ತೂ ನೋಡು, ಕಂಬಳಿಯು ಹೇಗೆ ಉಣ್ಣೆಯು ನೂಲಿನಿಂದ ಉತ್ಪನ್ನವಾಗಿದೆಯೋ, ಹಾಗೆಯೇ ಜೀವಾತ್ಮನು ಶಿವಸ್ವರೂಪನಾದ ಪರಮಾತ್ಮನಿಂದ ಉತ್ಪನ್ನನಾಗಿರುವನು.

[ಮುಂದುವರಿಯುವುದು]